# ನಿಮ್ಮೊಡನೆ

## ಎಸ್ಸೆಸ್ಸೆಲ್ಸಿ ಫಲಿತಾಂಶದ ಬಳಿಕ..

47 ಶಾಲೆಗಳಲ್ಲಿ ಪರೀಕ್ಷೆಗೆ ಕುಳಿತ ಎಲ್ಲ ವಿದ್ಯಾರ್ಥಿಗಳೂ ನಪಾಸಾಗಿ ಶೂನ್ಯ ಫಲಿತಾಂಶ ಬಂದಿದೆ ಎನ್ನುವುದು ಗಂಭೀರವಾಗಿ ಪರಿಗಣಿಸಬೇಕಾದ ವಿಚಾರ. ಅದರಲ್ಲಿ ನಾಲ್ಕು ಅನುದಾನಿತ ಶಾಲೆಗಳಿವೆ ಎನ್ನುವುದು ಕುತೂಹಲಕರ.

ಈ ಸಲದ ಎಸ್ಸೆಸ್ಸೆಲ್ಸಿ ಫಲಿತಾಂಶ ಶೈಕ್ಷಣಿಕ ವಲಯದಲ್ಲಿ ಸ್ವಲ್ಪ ಮಟ್ಟಿಗೆ ಉತ್ಸಾಹ ಉಕ್ಕಿಸಿದೆ. 8.25 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದು, 6.28 ಲಕ್ಷ ವಿದ್ಯಾರ್ಥಿಗಳು ಪಾಸಾಗಿದ್ದಾರೆ ಎನ್ನುವುದು ಖುಷಿಯ ಸಂಗತಿಯೇ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ಸಲ ಪಾಸಾದವರ ಸಂಖ್ಯೆ ಶೇಕಡಾ 76.13ರಷ್ಟಿದ್ದು ಇದೊಂದು ಹೊಸ ದಾಖಲೆ. ವಿದ್ಯಾರ್ಥಿಗಳ ಪರಿಶ್ರಮ, ಶಿಕ್ಷಕರ ಶ್ರಮ ಹಾಗೂ ಶಾಲೆಯ ಆಡಳಿತ ಮಂಡಳಿಗಳ ಚುರುಕಿನ ಕ್ರಮಗಳೆಲ್ಲವೂ ಈ ಫಲಿತಾಂಶ ಏರಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಖಾಸಗಿ ಶಾಲೆಗಳ ಪೈಕಿ ಶೇಕಡಾ 85ರಷ್ಟು (1194 ಶಾಲೆಗಳು) ನೂರು ಶೇಕಡಾ ಫಲಿತಾಂಶ ಸಾಧಿಸಿದ್ದರೆ, ಅನುದಾನಿತ ಶಾಲೆಗಳ ಪೈಕಿ ಶೇಕಡಾ 79ರಷ್ಟು (150 ಶಾಲೆಗಳು) ಹಾಗೂ ಸರಕಾರಿ ಶಾಲೆಗಳ ಪೈಕಿ ಶೇಕಡಾ 77ರಷ್ಟು (634 ಶಾಲೆಗಳು) ಶೇಕಡಾ ನೂರು ಫಲಿತಾಂಶ ಸಾಧಿಸಿವೆ. ನೂರು ಶೇಕಡಾ ಫಲಿತಾಂಶ ಸಾಧಿಸಿದ ಶಾಲೆಗಳ ಸಂಖ್ಯೆಯೂ ಈ ಸಲ ಹೆಚ್ಚಾಗಿದೆ. ದುಬಾರಿ ಫೀಸು ವಸೂಲಿ ಮಾಡುವ ಖಾಸಗಿ ಶಾಲೆಗಳಿಗೆ ಹೋಲಿಸಿದರೆ ಮೂಲಸೌಕರ್ಯಗಳಲ್ಲಿ ಸಾಕಷ್ಟು ಹಿಂದೆ ಇರುವ ಸರಕಾರಿ ಶಾಲೆಗಳು ಇಷ್ಟು ಹೆಚ್ಚಿನ ಪ್ರಮಾಣದಲ್ಲಿ ಶೇಕಡಾ ನೂರರ ಫಲಿತಾಂಶ ತಂದಿರುವುದು ಗಮನಾರ್ಹ ಸಂಗತಿ.

ಸಾಮಾನ್ಯವಾಗಿ ಅರ್ಧದಲ್ಲಿ ಶಾಲೆ ಬಿಡುವವರ ಪೈಕಿ ಗ್ರಾಮೀಣ ವಿದ್ಯಾರ್ಥಿಗಳು, ಅದರಲ್ಲೂ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿನಿಯರು ಇರುತ್ತಾರೆ ಎನ್ನುವುದು ಗೊತ್ತಿರುವ ಸಂಗತಿ. ಸಾಮಾಜಿಕ ಹಿಂದುಳಿದಿರುವಿಕೆ ಮಾತ್ರವಲ್ಲ, ಕೌಟುಂಬಿಕ ಸಮಸ್ಯೆಗಳೂ ಇದಕ್ಕೆ ಕಾರಣವಾಗಿವೆ. ಆದರೆ ಈ ಸಲದ ಫಲಿತಾಂಶ ಗಮನಿಸಿದರೆ, ನಗರದವರಿಗಿಂತ ಹೆಚ್ಚು ಗ್ರಾಮೀಣರು ಹಾಗೂ ವಿದ್ಯಾರ್ಥಿಗಳಿಗಿಂತ ಹೆಚ್ಚು ವಿದ್ಯಾರ್ಥಿನಿಯರು ಉತ್ತೀರ್ಣರಾಗಿದ್ದಾರೆ. ಬೆಂಗಳೂರು ನಗರ ಜಿಲ್ಲೆಯಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ಅತ್ಯಾಧುನಿಕ ಸೌಲಭ್ಯಗಳುಳ್ಳ ಶಾಲೆಗಳಿದ್ದರೂ, ಫಲಿತಾಂಶ ಪಟ್ಟಿಯಲ್ಲಿ ಅದರ ಸ್ಥಾನ ಸಾಕಷ್ಟು ಕೆಳಗಿದೆ. ಅತ್ಯಧಿಕ ಫಲಿತಾಂಶದ ಜಿಲ್ಲಾವಾರು ಪಟ್ಟಿಯಲ್ಲಿ ಉಡುಪಿ, ಶಿರಸಿ, ಹಾಸನ, ತುಮಕೂರು ಮತ್ತು ಚಿಕ್ಕೋಡಿ ಜಿಲ್ಲೆಗಳು ಮೊದಲ ಐದು ಸ್ಥಾನಗಳನ್ನು ಗಳಿಸಿರುವುದು ನೋಡಿದರೆ, ನಗರಗಳ ಶಾಲೆಗಳೇ ಅತ್ಯುತ್ತಮ ಎನ್ನುವ ಪೋಷಕರ ನಂಬಿಕೆ ತಲೆಕೆಳಗಾಗಿದೆ.

ಫಲಿತಾಂಶದಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿದವರಲ್ಲಿ ಮೂವರು ವಿದ್ಯಾರ್ಥಿಗಳು ನೀಡಿರುವ ಪ್ರತಿಕ್ರಿಯೆಗಳನ್ನೂ ಅವಶ್ಯವಾಗಿ ಗಮನಿಸಬೇಕಿದೆ. ಅತ್ಯಧಿಕ 623 ಅಂಕ ಗಳಿಸಿ ಫಲಿತಾಂಶದಲ್ಲಿ ಮೊದಲ ಸ್ಥಾನದಲ್ಲಿರುವ ಬಂಟ್ವಾಳದ ನವ್ಯಾ ಶೆಟ್ಟಿ, ವಿಜ್ಞಾನ ಹೊರತುಪಡಿಸಿ ಬೇರೆ ಯಾವುದೇ ವಿಷಯದಲ್ಲಿ ಟ್ಯೂಷನ್ ಪಡೆದಿಲ್ಲ. 621 ಅಂಕ ಗಳಿಸಿ ಎರಡನೇ ಸ್ಥಾನ ಹಂಚಿಕೊಂಡಿರುವ ಸುರತ್ಕಲ್‌ನ ಪಲ್ಲವಿ ಯಾವುದೇ ಟ್ಯೂಷನ್ ಕ್ಲಾಸ್‌ಗಳಿಗೆ ಹಾಜರಾಗಿಲ್ಲ. 620 ಅಂಕ ಗಳಿಸಿ ಮೂರನೇ ಸ್ಥಾನದಲ್ಲಿರುವ ಬೆಂಗಳೂರಿನ ಸುಹಾಸ್ ಅಂತೂ 'ಟ್ಯೂಷನ್‌ನ ಅಗತ್ಯ ಇದೆಯೆಂದು ನನಗೆ ಅನ್ನಿಸಿಯೇ ಇಲ್ಲ. ಶಾಲೆಯಲ್ಲಿ ಹೇಳಿಕೊಟ್ಟದ್ದು ಮತ್ತು ಕಲಿತದ್ದಷ್ಟೇ ಸಾಕಾಗಿದೆ' ಎಂದು ಪ್ರತಿಕ್ರಿಯೆ ನೀಡಿದ್ದಾನೆ. ಅತ್ಯಧಿಕ ಅಂಕ ಗಳಿಸಬೇಕಾದರೆ ಟ್ಯೂಷನ್ ಪಡೆಯಲೇಬೇಕು ಎಂಬ ಬಹುತೇಕ ಪೋಷಕರ ನಂಬಿಕೆ ಪೊಳ್ಳು ಎನ್ನುವುದು ಈ ಸಲವೂ ಸಾಬೀತಾಗಿದೆ.

47 ಶಾಲೆಗಳಲ್ಲಿ ಪರೀಕ್ಷೆಗೆ ಕುಳಿತ ಎಲ್ಲ ವಿದ್ಯಾರ್ಥಿಗಳೂ ನಪಾಸಾಗಿ ಶೂನ್ಯ ಫಲಿತಾಂಶ ಬಂದಿದೆ ಎನ್ನುವುದು ಗಂಭೀರವಾಗಿ ಪರಿಗಣಿಸಬೇಕಾದ ವಿಚಾರ. ಅದರಲ್ಲಿ ನಾಲ್ಕು ಅನುದಾನಿತ ಶಾಲೆಗಳಿವೆ ಎನ್ನುವುದು ಕುತೂಹಲಕರ. ಶಿಕ್ಷಣ ಇಲಾಖೆಯು ಈ ಶಾಲೆಗಳ ಕಡೆಗೆ ತುರ್ತು ಗಮನವನ್ನು ಹರಿಸಿ, ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾದ ಅಗತ್ಯವಿದೆ. ವಿಜಾಪುರ ಜಿಲ್ಲೆಯಲ್ಲಿ ಶೇಕಡಾ 71ರಷ್ಟು ಮಾತ್ರ ಪಾಸಾಗಿದ್ದರೆ, ಯಾದಗಿರಿಯಲ್ಲಿ ಶೇಖಡಾ 69ರಷ್ಟು ವಿದ್ಯಾರ್ಥಿಗಳಷ್ಟೇ ಪಾಸಾಗಿದ್ದಾರೆ. ಗುಲ್ಬರ್ಗಾ 33ನೇ ಸ್ಥಾನದಲ್ಲಿದೆ. ಬೀದರ್‌ನಲ್ಲಂತೂ ಶೇಕಡಾ 63ರಷ್ಟು ವಿದ್ಯಾರ್ಥಿಗಳು ಮಾತ್ರ ಪಾಸಾಗಿದ್ದು ಕಳೆದ ವರ್ಷದಂತೆ ಈ ಸಲವೂ ಕೊನೇ ಸ್ಥಾನದಲ್ಲಿದೆ. ಉತ್ತರ ಕರ್ನಾಟಕದ ಈ ಜಿಲ್ಲೆಗಳು ಹೀಗೆ ಶೈಕ್ಷಣಿಕ ಸಾಧನೆಯಲ್ಲಿ ಇಷ್ಟೊಂದು ಹಿಂದುಳಿಯಲು ಕಾರಣಗಳೇನು? ರಾಜಧಾನಿಯಿಂದ ದೂರವಿದ್ದು, ಅಭಿವೃದ್ಧಿ ಕಾರ್ಯಕ್ರಮಗಳಲ್ಲೂ ಹಿಂದುಳಿದಿರುವುದು ಇದಕ್ಕೆ ಕಾರಣವಿರಬಹುದೆ? ಹಾಗಿದ್ದರೆ, ರಾಜಧಾನಿಗೆ ಹತ್ತಿರವೇ ಇರುವ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳೂ ಫಲಿತಾಂಶದ ಪಟ್ಟಿಯಲ್ಲಿ ತುಂಬಾ ಕೆಳಗಿರುವುದಕ್ಕೆ ಏನು ಕಾರಣ? ಶಿಕ್ಷಕರ ಗುಣಮಟ್ಟದ ಜತೆಗೇ ಶೈಕ್ಷಣಿಕ ಸಂಸ್ಥೆಗಳ ದುರ್ಬಲ ಆಡಳಿತ ವ್ಯವಸ್ಥೆಯೂ ಇದಕ್ಕೆ ಕಾರಣವಿರಬಹುದಲ್ಲವೆ? ರಾಜ್ಯದ ಒಟ್ಟಾರೆ ಫಲಿತಾಂಶ ಉತ್ತಮಗೊಂಡರೆ ಮಾತ್ರ ಸಾಲುವುದಿಲ್ಲ; ಫಲಿತಾಂಶದಲ್ಲಿ ಪ್ರಾದೇಶಿಕ ಅಸಮಾನತೆಯೂ ನಿವಾರಣೆಯಾಗಬೇಕು. ಸರ್ಕಾರ ಈ ವಿಚಾರಗಳತ್ತ ಗಮನ ಹರಿಸಬೇಕು.

■ ಬಿ.ಎಂ.ಹನೀಫ್



ಅಭಿಜಿತ್ ಜೆ.ಕೆ.